ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಸಂಪರ್ಕ ಕೇಂದ್ರವನ್ನು ಸ್ಥಾಪಿಸುವುದು ಅವಶ್ಯಕ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬಂದಿದ್ದಲ್ಲಿ ಯಾವಾಗಿನಿಂದ ಹಜ್ ಯಾತ್ರಾರ್ಥಿಗಳ ಸಂಪರ್ಕ ಕೇಂದ್ರವನ್ನು ಸ್ಥಾಪಿಸಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

1. ಇಲ್ಲಾ.

2. ಉದ್ಭವಿಸುವುದಿಲ್ಲ.

ಹುಣಸೂರು ತಾಲ್ಲೂಕಿನ ಗಿರಿಜನರಿಗೆ ಅರಣ್ಯ ಭೂಮಿಯನ್ನು ವಿತರಿಸುವುದು.

2927(3684)

ಶ್ರೀ ಪಾಪಣ್ಣ ವಿ.(ಹುಣಸೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನ ಗಿರಿಜನರಿಗೆ ಭೂಮಿತಿಯನ್ನು ವಿತರಿಸಲು ಸರ್ಕಾರಿ ಜಮೀನು ಎಲ್ಲೆಲ್ಲಿ ಇದೆ ಎಂಬ ಬಗ್ಗೆ ಸರ್ಕಾರವು ಆದೇಶಿಸಿದೆಯೇ?

ಆ) ಈ ಬಗ್ಗೆ ಕಂದಾಯ ಇಲಾಖೆಯವರು ಕಂದಾಯ ಭೂಮಿ ಎಂದು ಗುರ್ತಿಸಿ ಲಭ್ಯವಿದೆ ಎಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವರೆ?

ಇ) ಕಂದಾಯ ಇಲಾಖೆಯವರು ಗುರ್ತಿಸಿರುವ ಭೂಮಿಯನ್ನು ಅರಣ್ಯ ಇಲಾಖೆಯವರು ನಮಗೆ ಸೇರಿದೆ ಎಂದು, ಅಲ್ಲಿ ಹಿಂದಿನಿಂದ ವ್ಯವಸಾಯ ಮಾಡುತ್ತಿದ್ದು, ಹಕ್ಕು ಪತ್ರವನ್ನು ಪಡೆದಿರುವ ರೈತರಿಗೆ ಅರಣ್ಯ ಇಲಾಖೆಯವರು ಅನಾವಶ್ಯಕವಾಗಿ ಮಧ್ಯ ಪ್ರವೇಶಿಸಿ ತೊಂದರೆಯನ್ನು ನೀಡುತ್ತಿರುವುದು ನಿಜವಲ್ಲವೆ?

ಈ) ಕಂದಾಯ ಇಲಾಖೆಯವರು ಹಾಗೂ ಅರಣ್ಯ ಇಲಾಖೆಯವರು ಪರಸ್ಪರವಾಗಿ ವಿರುದ್ಧ ನಿಲುವುಗಳನ್ನು ತಾಳಿರುವುದು ಸತ್ಯವಲ್ಲವೆ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ಇದು ಅರಣ್ಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಇ) ಅರಣ್ಯೇತರ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯು ಯಾವುದೇ ತರವು ಕಾರ್ಯ ಕೈಗೊಂಡಿರುವುದಿಲ್ಲ.

ಈ) ಇದು ಸತ್ಯವಲ್ಲ.

ಉ) ಉದ್ಭವಿಸುವುದಿಲ್ಲ.

ಕೇಂದ್ರ ರಸ್ತೆ ನಿಧಿಯಿಂದ (C.R.F) ರಾಜ್ಯಕ್ಕೆ ಮಂಜೂರಾದ ಹಣ.

2928(3780)

ಶ್ರೀ ವಿ.ಪಾಪಣ್ಣ(ಹುಣಸೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001 ಹಾಗೂ 2001-2002ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿಯಿಂದ ರಾಜ್ಯಕ್ಕೆ ಎಷ್ಟು ಹಣ ಮಂಜೂರಾಗಿದೆ; ಈವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಆ) ಕೇಂದ್ರ ರಸ್ತೆ ನಿಧಿ (ಸಿಆರ್‌ಎಫ್) ಕಾಮಗಾರಿ ಮಂಜೂರು ಮಾಡಲು ಮಾನದಂಡ ಯಾವುದು?

ಇ) ಕೇಂದ್ರ ರಸ್ತೆ ನಿಧಿಯಿಂದ (ಸಿಆರ್‌ಎಫ್) 2000-01 ಹಾಗೂ 2001-2002ನೇ ಸಾಲಿನಲ್ಲಿ ರಸ್ತೆ ಕಾಮಗಾರಿಗಳು ಮಂಜೂರಾಗಿರುವುದನ್ನು ಕ್ಷೇತ್ರವಾರು ಏವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆ):

ಅ) ಕೇಂದ್ರ ರಸ್ತೆ ನಿಧಿಯಡಿಯಲ್ಲಿ 2000-2001ನೇ ಸಾಲಿನಲ್ಲಿ ರೂ.57.50 ಕೋಟಿ ಮಂಜೂರಾಗಿರುತ್ತದೆ. ಈವರೆಗೂ 21.49 ಕೋಟಿಗಳು ಬಿಡುಗಡೆ ಮಾಡಲಾಗಿರುತ್ತದೆ.

2001-02ನೇ ಸಾಲಿನಲ್ಲಿ ಯಾವುದೇ ಹಣ ಮಂಜೂರಾಗಿರುವುದಿಲ್ಲ.